# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 695 |
| ಸದಸ್ಯರ ಹೆಸರು | ಶ್ರೀ ಮುನಿರಾಜುಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.07.2023 |
| ಉತ್ತರಿಸಬೇಕಾದ ಸಚಿವರು | ಕಂದಾಯ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರಿನಲ್ಲಿ ಡ್ರೋಣ್ ಸಮೀಕ್ಷೆಯ ಮೂಲಕ ಆಸ್ತಿ ಗಳನು ಸರ್ವೆ ಮಾಡಿ ಭೂಮಾಲೀಕರಿಗೆ ನೀಡುವ ಕಾರ್ಯ ಪ್ರಗತಿ ಯಲ್ಲಿದೆಯೇ; ಹಾಗಿದ್ದಲ್ಲಿ, ಸದರಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ;</td><td>ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಡ್ರೋಣ್ ಸಮೀಕ್ಷೆಯ ಮೂಲಕ ಆಸ್ತಿಗಳನ್ನು ಸರ್ವೆ ಮಾಡಿ ಪ್ರಾಪರ್ಟಿ ಕಾರ್ಡ್ ಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದ್ದು, ವಿವರ ಈ ಕೆಳಕಂಡಂತಿದೆ.
<table>
<tr><td>ಬಿ.ಬಿ.ಎಂ.ಪಿ. ವ್ಯಾಪ್ತಿಯ ಒಟ್ಟು ವಾರ್ಡ್ ಗಳ ಸಂಖ್ಯೆ</td><td>198</td></tr>
<tr><td>ಡ್ರೋಣ್ Fly Data ಪಡೆದಿರುವ ಹಾಗೂ ಅಳತೆ ಪರಿಶೀಲನೆ ಮಾಡುತ್ತಿರುವ ಒಟ್ಟು ವಾರ್ಡ್ಗಳ ಸಂಖ್ಯೆ</td><td>159</td></tr>
<tr><td>ಅಳತೆ ಕಾರ್ಯ ಪರಿಶೀಲನೆ ಪೂರ್ಣಗೊಂಡಿರುವ ವಾರ್ಡ್ ಗಳ ಸಂಖ್ಯೆ</td><td>136</td></tr>
<tr><td>ಅಳತೆ ಪರಿಶೀಲನೆ ಪ್ರಗತಿಯಲ್ಲಿರುವ ವಾರ್ಡ್ಗಳ ಸಂಖ್ಯೆ</td><td>20</td></tr>
<tr><td>ಅಳತೆ ಪರಿಶೀಲನೆಗೆ ಬಾಕಿ ಇರುವ ವಾರ್ಡ್ಗಳ ಸಂಖ್ಯೆ</td><td>3</td></tr>
</table>
ಉಳಿದ 39 ವಾರ್ಡ್‌ಗಳು ರಕ್ಷಣಾ ಪ್ರದೇಶವನ್ನು ಒಳಗೊಂಡಿದ್ದು, ಇವುಗಳು "NO FILYING ZONE" ಅಥವಾ "RED ZONE" ಆಗಿರುತ್ತದೆ. ಈ ಪ್ರದೇಶಗಳಲ್ಲಿ ಡ್ರೋಣ್ ಗಳನ್ನು ಹಾರಿಸಲು ಕೇಂದ್ರ ಸರ್ಕಾರದ ಅನುಮತಿ ಅಗತ್ಯವಾಗಿದ್ದು, ಅನುಮತಿ ಪಡೆಯುವ ಕಾರ್ಯ ಪ್ರಗತಿಯಲ್ಲಿರುತ್ತದೆ.</td></tr>
<tr><td>ಆ)</td><td>ಡ್ರೋಣ್ ಮೂಲಕ ಸಮೀಕ್ಷೆ ಮಾಡುವ ಪ್ರದೇಶದ ವ್ಯಾಪ್ತಿ ಯೆಷ್ಟು; ಸದರಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಸಂಖ್ಯೆ ಎಷ್ಟು?</td><td>ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಒಳಪಟ್ಟ 198 ವಾರ್ಡ್‌ಗಳ 709853972.1 ಚ.ಮೀಟರ್ ಪ್ರದೇಶವನ್ನು ಡ್ರೋಣ್ ಮೂಲಕ ಸರ್ವೆ ಮಾಡಲಾಗುತ್ತಿದೆ. ಅಂದಾಜು ಆಸ್ತಿಗಳ ಸಂಖ್ಯೆ 21,67,977.</td></tr>
<tr><td>ಇ)</td><td>ಸದರಿ ಡ್ರೋಣ್ ಸರ್ವೆ ಕಾರ್ಯ ವನ್ನು ಯಾರಿಗೆ ವಹಿಸಲಾಗಿದೆ; (ಏಜೆನ್ಸಿ ಅಥವಾ ಖಾಸಗಿ ಕಂಪನಿಯ ವಿವರ ನೀಡು ವುದು)</td><td>ಡ್ರೋಣ್ ಸರ್ವೆ ಕಾರ್ಯವನ್ನು ಕೇಂದ್ರ ಸರ್ಕಾರಿ ಸ್ವಾಮಿತ್ವದ ಭಾರತೀಯ ಸರ್ವೇಕ್ಷಣಾ ಸಂಸ್ಥೆಗೆ ವಹಿಸಲಾಗಿರುತ್ತದೆ.</td></tr>
<tr><td>ಈ)</td><td>ಇಲ್ಲಿಯವರೆಗೆ ಡ್ರೋಣ್ ಸರ್ವೆ ಕಾರ್ಯಕ್ಕಾಗಿ ಪಾವತಿಸಿದ ಹಣವೆಷ್ಟು; ಕಾರ್ಯದ ಪ್ರಗತಿ ಎಷ್ಟು;</td><td>ರಾಜ್ಯದ 5 ಜಿಲ್ಲೆಯಲ್ಲಿ (ತುಮಕೂರು, ರಾಮನಗರ, ಹಾಸನ, ಬೆಳಗಾವಿ, ಉತ್ತರ ದಕ್ಷಿಣ) ಮರುಮಾಪನ ಕಾರ್ಯ ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಡ್ರೋಣ್ ಹಾರಾಟ ಮಾಡಲು ಭಾರತೀಯ ಸರ್ವೇಕ್ಷಣಾ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. 49 CORS ಸ್ಥಾಪಿಸಲು ಹಾಗೂ ಡ್ರೋಣ್ ಹಾರಾಟಕ್ಕೆ ಭಾರತೀಯ ಸರ್ವೇಕ್ಷಣಾ ಸಂಸ್ಥೆಗೆ ಒಟ್ಟು 32.51 ಕೋಟಿ ಮೊತ್ತವನ್ನು ಪಾವತಿಸಲಾಗಿರುತ್ತದೆ.</td></tr>
<tr><td>ಉ)</td><td>ಯಾವ ಕಾಲಮಿತಿಯಲ್ಲಿ ಆಸ್ತಿ ಮಾಲೀಕರಿಗೆ ವೈಜ್ಞಾನಿಕ ದಾಖಲೆಗಳು ಸಿಗಲಿವೆ?</td><td>ಈಗಾಗಲೇ 123 ವಾರ್ಡ್ ಗಳ ವ್ಯಾಪ್ತಿಯಲ್ಲಿ ಸುಮಾರು 4,00,000 ಡ್ರಾಫ್ಟ್ ಪ್ರಾಪರ್ಟಿ ಕಾರ್ಡ್‌ಗಳು ಸಿದ್ಧವಾಗಿದ್ದು ವಿತರಣಾ ಕಾರ್ಯ ಪ್ರಗತಿಯಲ್ಲಿರುತ್ತದೆ.</td></tr>
</table>

**ಸಂಖ್ಯೆ: ಕಂಇ 115 ಎಸ್‌ಎಸ್‌ಸಿ 2023**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**